No:Compt/Uplok/BCD-4/2020/ARLO-1

# ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಸಿಡಿ–4/2020/ಎ.ಆರ್.ಎಲ್.ಒ–1. ದಿನಾಂಕ:19–04–2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:–** (1) ಶ್ರೀಮತಿ ಕೆ.ಎಂ. ಮನೋರಮಾ ವಿಶೇಷ ತಹಶೀಲ್ದಾರ್, ಆನೇಕಲ್ ತಾಲ್ಲೂಕ್ ಕಛೇರಿ, ಬೆಂಗಳೂರು ಮತ್ತು (2) ಶ್ರೀ ಎಸ್. ನಾಗೇಶ್,ದ್ವಿತೀಯ ದರ್ಜೆ ಸಹಾಯಕರು, ಆರ್.ಆರ್.ಟಿ. ಶಾಖೆ, ತಹಶೀಲ್ದಾರವರ ಕಛೇರಿ, ಆನೇಕಲ್ ತಾಲ್ಲೂಕ್, ಬೆಂಗಳೂರು ರವರು ದುರ್ನಡತೆ ಎಸಗಿರುವ ಬಗ್ಗೆ.

******

ಪ್ರಸ್ತುತ ದೂರನ್ನು ಗೌರವಾನ್ವಿತ ಉಪಲೋಕಾಯುಕ್ತ–1 ರವರು ಸ್ವಯಂ ಪ್ರೇರಿತವಾಗಿ (1) ಶ್ರೀಮತಿ ಕೆ.ಎಂ. ಮನೋರಮಾ, ವಿಶೇಷ ತಹಶೀಲ್ದಾರ್, ಆನೇಕಲ್ ತಾಲ್ಲೂಕ್ ಕಛೇರಿ, ಬೆಂಗಳೂರು ಮತ್ತು (2) ಶ್ರೀ ಎಸ್. ನಾಗೇಶ್,ದ್ವಿತೀಯ ದರ್ಜೆ ಸಹಾಯಕರು, ಆರ್.ಆರ್.ಟಿ. ಶಾಖೆ, ತಹಶೀಲ್ದಾರವರ ಕಛೇರಿ, ಆನೇಕಲ್ ತಾಲ್ಲೂಕ್, ಬೆಂಗಳೂರು ರವರ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ವಿರುದ್ದ ಕರ್ತವ್ಯದಲ್ಲಿ ದುರ್ನಡತೆ ಎಸಗಿರುವ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. **ದೂರಿನ ಸಂಕ್ಷಿಪ್ತ ವಿವರ:–** ಪ್ರಸ್ತುತ ಪ್ರಕರಣವನ್ನು ಗೌರವಾನ್ವಿತ ಉಪಲೋಕಾಯುಕ್ತ–1 ರವರು ತಹಶೀಲ್ದಾರ್, ಆನೇಕಲ್ ತಾಲ್ಲೂಕ್ ಕಛೇರಿ, ಬೆಂಗಳೂರು ನಗರ ಜಿಲ್ಲೆ ಕಛೇರಿಯ ಆರ್.ಆರ್.ಟಿ. ಶಾಖೆಗೆ ಖುದ್ದು ಭೇಟಿ ನೀಡಿ ಸ್ಥಳ ಪರಿವೀಕ್ಷಣೆಯ ಸಮಯದಲ್ಲಿ ಆರ್.ಆರ್.ಟಿ.ಪ್ರಕರಣಗಳನ್ನು ನಿರ್ವಹಿಸುವುದರಲ್ಲಿ ಆನೇಕಲ್ ತಾಲ್ಲೂಕ್ ತಹಶೀಲ್ದಾರ್ ಕಛೇರಿಯಲ್ಲಿ ಕಂಡುಬಂದ ನ್ಯೂನ್ಯತೆ/ಅಸಮರ್ಪಕ

ನಿರ್ವಹಣೆ (deficiency/mismanagement) ಗಳನ್ನು ಗಮನಿಸಿ ಆನೇಕಲ್ ತಾಲ್ಲೂಕಿನ ವಿಶೇಷ ತಹಶೀಲ್ದಾರ್ ಶ್ರೀಮತಿ ಕೆ.ಎಂ. ಮನೋರಮಾ ಮತ್ತು ತಹಿಶೀಲ್ದಾರ್ ಕಛೇರಿಯ ಆರ್.ಆರ್.ಟಿ. ಶಾಖೆಯ ದ್ವಿತೀಯ ದರ್ಜೆ ಸಹಾಯಕರಾದ ಶ್ರೀ ನಾಗೇಶ ರವರ ವಿರುದ್ದ ಸ್ವಯಂ ಪ್ರೇರಿತವಾಗಿ ಪ್ರಕರಣವನ್ನು ದಾಖಲಿಸಿ ಎದುರುದಾರರಿಗೆ ತಮ್ಮ ಆಕ್ಷೇಪಣೆಯನ್ನು ದಾಖಲೆಗಳೊಂದಿಗೆ ಸಲ್ಲಿಸುವಂತೆ ಆದೇಶಿಸಿರುತ್ತಾರೆ.

3. 1 ಮತ್ತು 2ನೇ ಎದುರುದಾರರು ಪ್ರತ್ಯೇಕವಾಗಿ ತಮ್ಮ ದಿನಾಂಕ:27-1-2020 ರ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

4. 1ನೇ ಎದುರುದಾರರಾದ ಶ್ರೀಮತಿ ಕೆ.ಎಂ.ಮನೋರಮಾ, ವಿಶೇಷ ತಹಶೀಲ್ದಾರ್, ಆನೇಕಲ್ ರವರು ತಮ್ಮ ಆಕ್ಷೇಪಣೆಯಲ್ಲಿ – ವಿಷಯ ನಿರ್ವಹಕರಾದ ಶ್ರೀ ನಾಗೇಶ್ ಎಸ್. ದ್ವಿತೀಯ ದರ್ಜೆ ಸಹಾಯಕರು ದಿನಾಂಕ:27-1-2020 ರಂದು ತಮ್ಮ ಸಮಜಾಯಿಷಿ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯನ್ನು ಹಾಗೂ ವಿಷಯ ವಹಿಯನ್ನು ಪರಿಶೀಲಿಸಿದಾಗ, ಕೈತಪ್ಪಿನಿಂದಾಗಿ ಹಾಗೂ ತಾಳೆ ಮಾಡುವಾಗ ಸಣ್ಣ-ಪುಟ್ಟ ವ್ಯತ್ಯಾಸಗಳನ್ನು ಸರಿಪಡಿಸಲು ವೈಟ್‌ನರ್ ಬಳಸಲಾಗಿದೆಯೇ ಹೊರತು ಉದ್ದೇಶಪೂರ್ವಕವಾಗಿ ಸಂಬಂಧಪಟ್ಟ ವಿಷಯ ನಿರ್ವಹಕರು ಯಾವುದೇ ನ್ಯೂನ್ಯತೆಗಳನ್ನು ಮಾಡಿರುವುದಿಲ್ಲವೆಂಬ ಅಂಶವು ಕಂಡುಬಂದಿರುತ್ತದೆ ಮತ್ತು ಖಾತೆಗೆ ಸಂಬಂಧಿಸಿದಂತೆ ಭೂ ಶಾಖೆಯಲ್ಲಿನ ತಂತ್ರಾಂಶದಲ್ಲಿ ಮಾಹಿತಿ ಒಳಗೊಂಡಿರುತ್ತದೆ. ಆದ್ದರಿಂದ ಪ್ರಾಥಮಿಕ ಪರಿಶೀಲನಾ ಟಿಪ್ಪಣಿಯನ್ನು ಮುಕ್ತಾಯಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

5. ಆದರೆ, 1ನೇ ಎದುರುದಾರರು/ತಹಶೀಲ್ದಾರ್ ರವರು ಗೌರವಾನ್ವಿತ ಉಪಲೋಕಾಯುಕ್ತ-1 ರವರು ಆನೇಕಲ್ ತಾಲ್ಲೂಕ್ ಕಛೇರಿಯ ಆರ್.ಆರ್.ಟಿ. ಶಾಖೆಗೆ ಖುದ್ದು ಭೇಟಿ ನೀಡಿ ಗಮನಿಸಿದಂತಹ ಪ್ರಾಥಮಿಕ ಪರಿಶೀಲನಾ ಟಿಪ್ಪಣಿಯಲ್ಲಿ

4

ನಮೂದಿಸಿದ ನ್ಯೂನ್ಯತೆ/ಅಸಮರ್ಪಕ ನಿರ್ವಹಣೆ (deficiency/mismanagement) ಗಳ ಎಲ್ಲಾ ಅಂಶಗಳ ಬಗ್ಗೆ ವಿವರವಾಗಿ ತಮ್ಮ ಆಕ್ಷೇಪಣೆಯಲ್ಲಿ ಉತ್ತರಿಸಿರುವುದಿಲ್ಲ.

6. 2ನೇ ಎದುರುದಾರರಾದ ಶ್ರೀ ನಾಗೇಶ್.ಎಸ್. ದ್ವಿತೀಯ ದರ್ಜೆ ಸಹಾಯಕ/ ಆರ್.ಆರ್.ಟಿ ಶಾಖೆಯ ವಿಷಯ ನಿರ್ವಾಹಕರು ತಮ್ಮ ಆಕ್ಷೇಪಣೆಯಲ್ಲಿ ಗೌರವಾನ್ವಿತರು ಗಮನಿಸಿದ ನ್ಯೂನ್ಯತೆಗಳ ಬಗ್ಗೆ ತಮ್ಮ ಸಮಜಾಯಿಷಿಯನ್ನು ನೀಡಿರುತ್ತಾರೆ. ಗೌರವಾನ್ವಿತ ಉಪಲೋಕಾಯುಕ್ತ–1 ರವರು ಆನೇಕಲ್ ತಾಲ್ಲೂಕ್ ಕಛೇರಿಯ ಆರ್.ಆರ್.ಟಿ. ಶಾಖೆಗೆ ಖುದ್ದು ಭೇಟಿ ನೀಡಿದ ಸಮಯದಲ್ಲಿ ಸ್ಥಳ ಪರಿಶೀಲಿಸಿ ಗಮನಿಸಿದ ನ್ಯೂನ್ಯತೆಗಳು ಹಾಗೂ ಅದಕ್ಕೆ 2ನೇ ಎದುರುದಾರರ ಸಮಜಾಯಿಷಿ ಈ ಕೆಳಕಂಡಂತೆ ಇರುತ್ತದೆ.

> (i) Sri. Nagesh, Second Division Assistant has submitted that he does not have the information regarding the applications submitted for change of khata in respect of entire taluk. He submits that there is no information available regarding the applications, submitted for change of khata. He has concealed the fact of receipt of applications. It is needless to state that RRT disputes are registered, after applications for change of khata are filed and objections for change of khata are submitted by the Opponents.

7. ಮೇಲ್ಕಂಡ ನ್ಯೂನ್ಯತೆ/ಅಸಮರ್ಪಕ ನಿರ್ವಹಣೆಗೆ ಸಂಬಂಧಪಟ್ಟಂತೆ 2ನೇ ಎದುರುದಾರರಾದ ಶ್ರೀ ನಾಗೇಶ್.ಎಸ್. ದ್ವಿತೀಯ ದರ್ಜೆ ಸಹಾಯಕರವರ ಸಮಜಾಯಿಷಿ ಈ ಕೆಳಕಂಡಂತೆ ಇರುತ್ತದೆ.

"ಭೂಮಿ ಕೇಂದ್ರದಲ್ಲಿ ಖಾತೆ ಪ್ರಕ್ರಿಯೆ ನಡೆಯುವುದರಿಂದ ಪೂರ್ಣ ತಾಲ್ಲೂಕಿಗೆ ಸಂಬಂಧಿಸಿದಂತೆ ಖಾತೆ ವಿಚಾರದಲ್ಲಿ ಮಾಹಿತಿಯು ಭೂಮಿ ಕೇಂದ್ರದಲ್ಲಿ ಲಭ್ಯವಿದ್ದು ಅಲ್ಲಿಯೇ ಪಡೆಯಬೇಕಾಗಿರುತ್ತದೆ/ಪರಾಮರ್ಶಿಸಬಹುದಾಗಿರುತ್ತದೆ."

8. (ii) Sri. Nagesh, Second Division Assistant has submitted the Register of RRT disputes. The entries at page no.12 are obliterated by applying whitener and there is no endorsement to that effect. The numericals in page 13 are

altered. The entries are not attested by Special Tahsildar. In relation to RRT disputes entered at page 14 from No.93/ 16-17 to 97/16-17 there are no endorsement. It is not known whether the disputes are disposed or not. The page Nos.41,42 and 43 of the Register are left blank without there being any reason. There is scope for insertion of contents at a later stage.

9. ವಹಿ ಪುಟ ಸಂಖ್ಯೆ: 12 ರಲ್ಲಿ ವೈಟ್‌ನರ್ ಬಳಸಿ ತಿದ್ದುಪಡಿ ಮಾಡಲಾಗಿರುತ್ತದೆ ಹಾಗೂ ಆ ಬಗ್ಗೆ ಯಾವುದೇ ಷರಾ ಇವುರುದಿಲ್ಲ ಎನ್ನುವ ಅಂಶದ ಬಗ್ಗೆ 2ನೇ ಎದುರುದಾರರಾದ ಶ್ರೀ ನಾಗೇಶ್.ಎಸ್. ದ್ವಿತೀಯ ದರ್ಜೆ ಸಹಾಯಕರವರ ಸಮಜಾಯಿಷಿ ಈ ಕೆಳಕಂಡಂತೆ ಇರುತ್ತದೆ.

"ಶಾಖೆಯ ವಹಿಯ ಪುಟ ಸಂಖ್ಯೆ:12 ರಲ್ಲಿ ವೈಟ್‌ನರ್ ಹಚ್ಚಿದ್ದು. ಈ ಬಗ್ಗೆ ಹಚ್ಚಿರುವುದಕ್ಕೆ ಯಾವುದೇ ಕಾರಣ ನಮೂದು ಇರುವುದಿಲ್ಲ.

ಕೈತಪ್ಪಿನಿಂದ/ಕಣ್ತಪ್ಪಿನಿಂದ/ಕೆಲಸದ ಒತ್ತಡದಲ್ಲಿ ಸಣ್ಣ ನ್ಯೂನ್ಯತೆ ಉಂಟಾಗಿದ್ದು ಯಾವುದೇ ದುರುದ್ದೇಶ ಇರುವುದಿಲ್ಲ."

10. ವಹಿ ಪುಟ ಸಂಖ್ಯೆ.13 ರಲ್ಲಿ ಸಂಖ್ಯೆಗಳನ್ನು ಬದಲಾವಣೆ ಮಾಡಿದ್ದು ಸದರಿ ಬದಲಾವಣೆಯ ನಮೂದುಗಳ ಬಗ್ಗೆ ವಿಶೇಷ ತಹಶೀಲ್ದಾರ್‌ರವರ ದೃಢೀಕರಣ ಇಲ್ಲ ಎನ್ನುವುದರ ಬಗ್ಗೆ 2ನೇ ಎದುರುದಾರರ ಸಮಜಾಯಿಷಿ ಈ ಕೆಳಕಂಡಂತೆ ಇರುತ್ತದೆ.

"ಪುಟ ಸಂಖ್ಯೆ:13 ರಲ್ಲಿನ ಘೋಷ್ವಾರೆಯಲ್ಲಿ ತಿದ್ದುಪಡಿ ಆಗಿದ್ದು. ವಿಶೇಷ ತಹಶೀಲ್ದಾರವರ ಬಳಿ ಅನುಮೋದನೆಗೊಂಡಿರುವುದಿಲ್ಲ."

"ಸದರಿ ತಿದ್ದುಪಡಿ 2016ನೇ ಸಾಲಿನ ಆಗಸ್ಟ್ ತಿಂಗಳ ಘೋಷ್ವಾರ ಆಗಿದ್ದು, ಮಾಸಾಂತ್ಯದ ಘೋಷ್ವಾರೆಯಲ್ಲಿ ಲೆಕ್ಕ ಹಾಕುವಾಗ ತಪ್ಪಾಗಿರುವುದನ್ನು ಸರಿಪಡಿಸಲು

ವೈಟ್‌ನರ್ ಬಳಸಲಾಗಿದೆ. ಅನುಮೋದನೆ ಪಡೆದುಕೊಂಡಿರುವುದಿಲ್ಲವೆಂಬುದನ್ನು ಗಮನಿಸಿರುವುದಿಲ್ಲ. ಈ ವಿಚಾರದಲ್ಲಿಯೂ ಸಹ ಯಾವುದೇ ದುರುದ್ದೇಶ ಇರುವುದಿಲ್ಲ."

11. ವಹಿ ಪುಟ ಸಂಖ್ಯೆ:14 ರಲ್ಲಿ ಆರ್.ಆರ್.ಟಿ.ಸಂಖ್ಯೆ:93/16-17 ರಿಂದ 97/16-17 ರ ಷರಾ ಇರುವುದಿಲ್ಲ ಹಾಗೂ ಸದರಿ ಪ್ರಕರಣಗಳು ವಿಲೇ ಆಗಿದಿಯೇ ಅಥವಾ ಇಲ್ಲವೇ ಎನ್ನುವುದರ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುವ ಅಂಶದ ಬಗ್ಗೆ 2ನೇ ಎದುರುದಾರರ ಸಮಜಾಯಿಷಿ ಈ ಕೆಳಕಂಡಂತೆ ಇರುತ್ತದೆ.

"ಪುಟ ಸಂಖ್ಯೆ:16ರಲ್ಲಿನ ನಮೂದಾಗಿರುವ ಪ್ರಕರಣ ಸಂಖ್ಯೆ:93/16-17 ರಿಂದ 97/16-17 ರ ವಿಲೇವಾರಿ ಬಗ್ಗೆ ಮಾಹಿತಿ ಇರುವುದಿಲ್ಲ."

"ಸದರಿ ಪ್ರಕರಣಗಳು ಈಗಾಗಲೇ ಮುಕ್ತಾಯಗೊಂಡಿದ್ದು, ವಿಷಯ ವಹಿಯಲ್ಲಿ ಸದರಿ ನಮೂದನ್ನು ಗುಂಡು ಸುತ್ತಿದ್ದು, ಗುಂಡು ಸುತ್ತಿರುವ ಕೆಳಭಾಗದಲ್ಲಿ ವಿಲೇ ಆಗಿರುವ ಬಗ್ಗೆ ನಮೂದಾಗಿರುವುದಿಲ್ಲ. ಹಾಲಿ ಜಮೀನುಗಳ ವಿಚಾರದಲ್ಲಿ ಖಾತೆ ಬದಲಾವಣೆ ಆಗಿ ಮುಕ್ತಾಯಗೊಂಡಿರುತ್ತದೆ. ತಮ್ಮ ಅವಗಾಹನೆಗಾಗಿ ತರಬಯಸುತ್ತಾ, ಇನ್ನು ಮುಂದೆ ಪ್ರಕರಣ ವಿಲೇವಾರಿ ಆದ ಸಂದರ್ಭದಲ್ಲಿ ಗುಂಡು ಸುತ್ತಿ ಪ್ರಕರಣದ ವಿಲೇವಾರಿ ಬಗ್ಗೆ ಷರಾ ಬರೆಯುವುದಾಗಿ ಈ ಮೂಲಕ ಪ್ರಾರ್ಥಿಸುತ್ತೇನೆ."

12. ವಹಿ ಪುಟ ಸಂಖ್ಯೆ:41, 42 ಮತ್ತು 43 ಅನ್ನು ಯಾವುದೇ ಸಕಾರಣ ಇಲ್ಲದೇ ಖಾಲಿ ಬಿಟ್ಟಿದ್ದು ನಂತರದ ಸಮಯದಲ್ಲಿ ಅವುಗಳಲ್ಲಿ ಅಂಶಗಳನ್ನು ಸೇರಿಸುವ ಸಾಧ್ಯತೆ ಇರುತ್ತದೆ ಎನ್ನುವ ಅಂಶದ ಬಗ್ಗೆ 2ನೇ ಎದುರುದಾರರ ಸಮಜಾಯಿಷಿ ಈ ಕೆಳಕಂಡಂತೆ ಇರುತ್ತದೆ.

"ವಿಷಯ ವಹಿಯ ಪುಟ ಸಂಖ್ಯೆ:41, 42 ಮತ್ತು 43 ರಲ್ಲಿ ಖಾಲಿ ಹಾಳೆಗಳನ್ನು ಯಾವುದೇ ಕಾರಣ ಇಲ್ಲದೇ ಬಿಟ್ಟಿರುವ ಬಗ್ಗೆ ವಿಷಯ ವಹಿಯ ಪುಟ ಸಂಖ್ಯೆ:41, 42 ಮತ್ತು 43, 2016-17 ರ ಸಾಲು ಅಂತ್ಯಗೊಂಡ ಕಾರಣ ಸದರಿ ಪುಟಗಳನ್ನು ಖಾಲಿ

ಬಿಟ್ಟು 2017-18 ರ ಸಾಲು ಮುಂದುವರೆಸಿರುತ್ತೇನೆ ಮತ್ತು ಎರಡು ಸಾಲಿನ ಮಾಹಿತಿಯು ಒಂದೇ ಪುಸ್ತಕದಲ್ಲಿ ಮುಂದುವರೆಸಲ್ಪಟ್ಟಿರುವುದರಿಂದ ಗುರುತಿಸುವಿಕೆಗಾಗಿ ಸಾಮಾನ್ಯವಾಗಿ 2 ಪುಟಗಳನ್ನು ಖಾಲಿ ಬಿಟ್ಟು ಮುಂದಿನ ಸಾಲನ್ನು ಮುಂದುವರೆಸಿರುತ್ತೇನೆ. ಯಾವುದೇ ದುರುದ್ದೇಶದಿಂದ ಕ್ರಮ ವಹಿಸಿರುವುದಿಲ್ಲ."

ವಹಿಯ ಪುಟ ಸಂಖ್ಯೆ:40 ಅನ್ನು ಪರಿಶೀಲಿಸಿದಾಗ ಮಾರ್ಚ್ ತಿಂಗಳ ವಿವಾದಾಸ್ಪದ ಪ್ರಕರಣಗಳ ಪ್ರಗತಿ ತ:ಖ್ತೆ ಎಂದು ಕಂಡುಬರುತ್ತದೆ. ಆದರೆ, ಸದರಿ ಪುಟದಲ್ಲಿ 2016-17 ರ ಸಾಲು ಅಂತ್ಯಗೊಂಡ ಬಗ್ಗೆ ಯಾವುದೇ ಷರಾ/ನಮೂದು ಕಂಡುಬರುವುದಿಲ್ಲ. ಪುಟ ಸಂಖ್ಯೆ:40 ರ ನಂತರ ಪುಟ ಸಂಖ್ಯೆ:44 ಇರುವುದು ವಹಿ ಪ್ರತಿ ಪರಿಶೀಲಿಸಿದಾಗ, ಕಂಡುಬರುತ್ತಿದ್ದು ಪುಟ ಸಂಖ್ಯೆ:41, 42 ಮತ್ತು 43 ವಹಿಯಲ್ಲಿ ಇರುವುದು ಕಂಡುಬರುತ್ತಿಲ್ಲ. ಒಂದು ವೇಳೆ ಪುಟ ಸಂಖ್ಯೆ:44 ರಿಂದ 2017-18 ನೇ ಸಾಲು ಆರಂಭವಾದರೆ ಸದರಿ ಪುಟ ಸಂಖ್ಯೆ:44 ರ ಮೇಲೆ ಹೊಸ ಸಾಲು ಆರಂಭವಾದ ಬಗ್ಗೆ ನಮೂದು ಇರುವುದಿಲ್ಲ.

13. ಪ್ರಸ್ತುತ ಸ್ವಯಂ ಪ್ರೇರಿತವಾಗಿ ದಾಖಲಾಗಿರುವ ಪ್ರಾಥಮಿಕ ಪರಿಶೀಲನಾ ಟಿಪ್ಪಣಿಯಲ್ಲಿ ನಮೂದಿಸಿರುವ ಗೌರವಾನ್ವಿತ ಉಪಲೋಕಾಯುಕ್ತ-1 ರವರು ಆನೇಕಲ್ ತಹಶೀಲ್ದಾರ್ ಕಛೇರಿಯ ಆರ್.ಆರ್.ಟಿ. ಶಾಖೆಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿದಾಗ, ಕಂಡುಬಂದ ನ್ಯೂನ್ಯತೆ ಮತ್ತು ಅಸಮರ್ಪಕ ನಿರ್ವಹಣೆ (deficiency/mismanagement) ಗಳಿಗೆ ಸಂಬಂಧಪಟ್ಟಂತೆ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ, ಕಂಡುಬಂದಿರುವ ನ್ಯೂನ್ಯತೆಗಳು ಈ ಕೆಳಕಂಡಂತೆ ಇರುತ್ತವೆ.

ಆನೇಕಲ್ ತಾಲ್ಲೂಕ್ ಕಛೇರಿಯಲ್ಲಿ ಆನೇಕಲ್ ತಾಲ್ಲೂಕಿನಾದ್ಯಂತ ಖಾತೆ ಬದಲಾವಣೆಗೆ ಸಲ್ಲಿಸಿದ ಅರ್ಜಿಗಳ ಮಾಹಿತಿ ಇರುವುದಿಲ್ಲ. ಆರ್.ಆರ್.ಟಿ. ಶಾಖೆಯ ವಹಿ ಪುಟ

ಸಂಖ್ಯೆ:12 ರಲ್ಲಿ ವೈಟ್‌ನರ್ ಬಳಸಿ ತಿದ್ದುಪಡಿ ಮಾಡಿರುವ ಬಗ್ಗೆ ಯಾವುದೇ ಷರಾ ಇರುವುದಿಲ್ಲ. ವಹಿ ಪುಟ ಸಂಖ್ಯೆ:13 ರಲ್ಲಿ ಸಂಖ್ಯೆಗಳನ್ನು ಬದಲಾವಣೆ ಮಾಡಿದ್ದು, ಸದರಿ ಬದಲಾವಣೆಯ ನಮೂದುಗಳ ಬಗ್ಗೆ ವಿಶೇಷ ತಹಶೀಲ್ದಾರ್‌ರವರ ದೃಢೀಕರಣ ಇರುವುದಿಲ್ಲ. ವಹಿ ಪುಟ ಸಂಖ್ಯೆ:14 ರಲ್ಲಿ ಆರ್.ಆರ್.ಟಿ. ಸಂಖ್ಯೆ:93/16-17 ರಿಂದ 97/16-17 ರ ಷರಾ ಇರುವುದಿಲ್ಲ ಹಾಗೂ ಪ್ರಕರಣದ ವಿಲೇ ಬಗ್ಗೆಯೂ ಯಾವುದೇ ಮಾಹಿತಿ ಇರುವುದಿಲ್ಲ. ವಹಿ ಪುಟ ಸಂಖ್ಯೆ:41, 42 ಮತ್ತು 43 ಅನ್ನು ಯಾವುದೇ ಸಕಾರಣ ಇಲ್ಲದೇ ಖಾಲಿ ಬಿಡಲಾಗಿದೆ. ವಹಿಯ ಪುಟ ಸಂಖ್ಯೆ:40 ರಲ್ಲಿ ಮಾರ್ಚ್ ತಿಂಗಳ ವಿವಾದಾಸ್ಪದ ಪ್ರಕರಣಗಳ ಪ್ರಗತಿ ತ:ಖ್ತೆ ಇದ್ದು ಆದರೆ, 2016-17ನೇ ಸಾಲು ಅಂತ್ಯಗೊಂಡ ಬಗ್ಗೆ ಯಾವುದೇ ನಮೂದು ಇರುವುದಿಲ್ಲ. ಪುಟ ಸಂಖ್ಯೆ:40 ರ ನಂತರ ಪುಟ ಸಂಖ್ಯೆ:44 ಇರುತ್ತದೆ.

14. ಮೇಲೆ ವಿವರಿಸಿರುವ ನ್ಯೂನ್ಯತೆ ಮತ್ತು ಅಸಮರ್ಪಕ ನಿರ್ವಹಣೆ (deficiency/mismanagement) ಯ ಹಿನ್ನಲೆಯಲ್ಲಿ ಯಾವ ರೀತಿಯ ದುರ್ನಡತೆ 1 ಮತ್ತು 2ನೇ ಎದುರುದಾರರಿಂದ ಆಗಿರುತ್ತದೆ ಎಂಬುದನ್ನು ಪರಿಗಣಿಸುವುದು ಹಾಗೂ ಮೇಲೆ ಉಲ್ಲೇಖಿತ ನ್ಯೂನ್ಯತೆ ಮತ್ತು ಅಸಮರ್ಪಕ ನಿರ್ವಹಣೆ (deficiency/mismanagement) ಯ ಹಿಂದೆ ಯಾವುದಾದರೂ ನಿರ್ದಿಷ್ಟ ಪ್ರೇರಣೆಯಾಗಲೀ ಅಥವಾ ಯಾವುದೇ ದುರುದ್ದೇಶದಿಂದ ಮಾಡಿರುವ ಕೃತ್ಯವಾಗಿದೆಯೇ ಎಂಬುದನ್ನು ಪರಿಗಣಿಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ 1 ಮತ್ತು 2ನೇ ಎದುರುದಾರರ ಆಕ್ಷೇಪಣೆಗಳು ಹಾಗೂ ಆರ್.ಆರ್.ಟಿ.ವಹಿಯ ಪ್ರತಿಯನ್ನು ಪರಿಶೀಲಿಸಿದಾಗ, ಸದರಿ ವಹಿಯಲ್ಲಿ ವೈಟ್‌ನರ್ ಬಳಸಿ ಯಾವುದೇ ಷರಾ ಬರೆಯದೇ ಇರುವುದು ಹಾಗೂ ಸಂಖ್ಯೆಗಳನ್ನು ಬದಲಾವಣೆ ಮಾಡಿರುವ ಬಗ್ಗೆ ವಿಶೇಷ ತಹಶೀಲ್ದಾರ್ ರವರ ದೃಢೀಕರಣ ಇಲ್ಲದೇ ಇರುವುದು ಹಾಗೂ ಕಡತಗಳ ವಿಲೇವಾರಿಯ ಬಗ್ಗೆ ನಮೂದಿಸದೇ ಇರುವ ಅಂಶಗಳು ಹಾಗೂ ವಹಿಯ ಪುಟಗಳನ್ನು

ಬಿಟ್ಟು ಬೇರೆ ಹೊಸ ಹಾಳೆಗಳಿಂದ ಮುಂದುವರೆಸಿರುವುದು ಯಾವುದೇ ಒಬ್ಬ ವ್ಯಕ್ತಿಗೆ ಅನುಕೂಲ ಮಾಡುವುದಕ್ಕಾಗಲೀ ಅಥವಾ ಯಾವುದೇ ವ್ಯಕ್ತಿಗೆ ಹಾನಿ ಅಥವಾ ನಷ್ಟವನ್ನುಂಟು ಮಾಡುವ ಉದ್ದೇಶದಿಂದಾಗಲೀ ಮಾಡಿರುವುದು ಕಂಡುಬರುವುದಿಲ್ಲ. ಸದರಿ ನ್ಯೂನ್ಯತೆ ಮತ್ತು ಅಸಮರ್ಪಕ ನಿರ್ವಹಣೆ ಯಾವುದೇ ವ್ಯಕ್ತಿಗೆ ನಷ್ಟಪಡಿಸಲು ಅಥವಾ ಹಾನಿಗೊಳಿಸಲು ಮಾಡಿರುವಂತಹ ಕೃತ್ಯಗಳು ಎನ್ನುವುದು ಮೇಲ್ನೋಟಕ್ಕೆ ಕಂಡುಬರುವುದಿಲ್ಲ. ಸದರಿ ಮೇಲೆ ಉಲ್ಲೇಖಿತ ನ್ಯೂನ್ಯತೆ ಮತ್ತು ಅಸಮರ್ಪಕ ನಿರ್ವಹಣೆಯು (deficiency/mismanagement) ಯಾವುದೇ ಉದ್ದೇಶಪೂರ್ವಕವಲ್ಲದ ನ್ಯೂನ್ಯತೆಗಳಾಗಿರುವುದು ಕಂಡುಬರುತ್ತದೆ. ಆದ್ದರಿಂದ, ವಿಷಯ ವಹಿಯನ್ನು ನಿರ್ವಹಿಸುವಾಗ ಕೈತಪ್ಪಿನಿಂದಾಗಿ ಹಾಗೂ ತಾಳೆ ಮಾಡುವಾಗ ಆದ ವ್ಯತ್ಯಾಸಗಳಿಂದ ಉಂಟಾದ ನ್ಯೂನ್ಯತೆಗಳು ಎನ್ನುವುದು ಕಂಡುಬರುತ್ತದೆ.

15. ಆದರೆ, ಇದರಿಂದ 1 ಮತ್ತು 2ನೇ ಎದುರುದಾರರು ತಮ್ಮ ಕಛೇರಿಗಳಲ್ಲಿನ ವಹಿಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದು ಕಂಡುಬರುತ್ತದೆಯೆ ಹೊರತು ಇದು ಯಾವುದೇ ದುರುದ್ದೇಶದಿಂದ ಕೂಡಿರುವ ಬಗ್ಗೆ ಯಾವುದೇ ಅಂಶಗಳು ಕಂಡು ಬಾರದೇ ಇರುವುದರಿಂದ ಇನ್ನು ಮುಂದೆ ಕಛೇರಿಯ ವಹಿಗಳನ್ನು ನಿಯಮದಂತೆ ಕ್ರಮಬದ್ದವಾಗಿ ಯಾವುದೇ ನ್ಯೂನ್ಯತೆಗಳಿಲ್ಲದೇ ನಿರ್ವಹಿಸುವಂತೆ ಎದುರುದಾರರಾದ (1) ಶ್ರೀಮತಿ ಕೆ.ಎಂ. ಮನೋರಮಾ, ವಿಶೇಷ ತಹಶೀಲ್ದಾರ್, ಆನೇಕಲ್ ತಾಲ್ಲೂಕ್ ಕಛೇರಿ, ಬೆಂಗಳೂರು ಮತ್ತು (2) ಶ್ರೀ ಎಸ್. ನಾಗೇಶ್, ದ್ವಿತೀಯ ದರ್ಜೆ ಸಹಾಯಕರು, ಆರ್.ಆರ್.ಟಿ. ಶಾಖೆ, ತಹಶೀಲ್ದಾರವರ ಕಛೇರಿ, ಆನೇಕಲ್ ತಾಲ್ಲೂಕ್, ಬೆಂಗಳೂರು ರವರಿಗೆ ಸೂಚಿಸುವಂತೆ ಕ್ರಮ ತೆಗೆದುಕೊಳ್ಳುವ ಕುರಿತು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

16. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(4) ರ ಅನ್ವಯ ಈ ವರದಿಯ ಮೇಲೆ ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿಯನ್ನು ಮೂರು ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಶಿಸ್ತು ಪ್ರಾಧಿಕಾರವನ್ನು ಕೋರಲಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಲಾಗಿದೆ.

21/4/22

[ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.